ಬಹಳ ಜನರು ಬರುತ್ತಾರೆ, ನಾವು ಇದಕ್ಕೆ ಯಾರನ್ನು ಚುನಾಯಿಸುವುದು? ಇದಕ್ಕೆ ಏನು ಆಧಾರವಿರಬೇಕು? ಈ ಹಿಂದೆ 'ಜಪಾನ್-ಎಕ್ಸಪೋ'ಗೆ ರೈತ ವಿದ್ಯಾರ್ಥಿಗಳನ್ನು ಕಳುಹಿಸಿದಂಥ ಸಂದರ್ಭದಲ್ಲಿ ಏನಾಯಿತೆಂಬುದು ಗೊತ್ತಿದೆ! ಈ ಎಲ್ಲಾ ಅನುಭವದ ಹಿನ್ನೆಲೆಯಲ್ಲಿ ಸರ್ಕಾರದಿಂದ ಯಾವುದೇ ರೀತಿಯ ಹಣಕಾಸಿನ ನೆರವನ್ನೂ ಕೊಡದಿರುವುದು ಸೂಕ್ತವೆಂಬ ತೀರ್ಮಾನಕ್ಕೆ ಸರ್ಕಾರ ಬಂದಿದೆ. ಆದರೆ, ಇಸ್ರೇಲನ ಕೃಷಿ ತಂತ್ರಜ್ಞಾನದ ಬಗ್ಗೆ ಮಾರ್ಗದರ್ಶನ ಬೇಕಾಗಿದ್ದರೆ ಎಂಬಿಸ್ಸಿ ಮೂಲಕ ವ್ಯವಸ್ಥೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಪಡುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮುಖ್ಯಮಂತ್ರಿಗಳು ವಿದೇಶಕ್ಕೆ ಪ್ರವಾಸ ಹೋಗಿ ಬಂದಂಥ ಸಂದರ್ಭದಲ್ಲಿ ಕರ್ನಾಟಕ ಕೆಲವು ಶಾಸಕ ಮಿತ್ರರೂ ಸಹ ಆ ಅನುಭವ ಪಡೆದುಕೊಳ್ಳುವುದಕ್ಕೆ ಇಸ್ರೇಲಗೆ ಕರೆದುಕೊಂಡು ಹೋಗುವ ಬಗ್ಗೆ ನಿರ್ಣಯ ಮಾಡುವುದಾಗಿ ಹೇಳಿದ್ದರು. ಇದರ ಬಗ್ಗೆ ಸರ್ಕಾರವೇನಾದರೂ ಆಲೋಚಿಸಿದೆಯೇ?

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಇದರ ಬಗ್ಗೆ ಸರ್ಕಾರ ಪ್ರಯತ್ನಿಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ, ಪ್ರತಿಯೊಬ್ಬ ರೈತರೂ ಐವತ್ತು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಇಸ್ರೇಲಗೆ ಹೋಗಿ ಅಲ್ಲಿನ ಕೃಷಿ ತಂತ್ರಜ್ಞಾನದ ಬಗ್ಗೆ ಆಳವಾದ ಅಧ್ಯಯನ ಮಾಡುವುದು ನಿಜವಾಗಿಯೂ ಅಸಾಧ್ಯ.

ಮಾಲೂರು ನಗರದಲ್ಲಿ ತೋಟಗಾರರ ಸಹಕಾರ ಸಂಘದ ಮಳಿಗೆ ಸ್ಥಾಪನೆ.

113 - ಮಾನ್ಯ ತೋಟಗಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) *ಮಾಲೂರು ನಗರದಲ್ಲಿ ತೋಟಗಾರರ ಸಹಕಾರ ಸಂಘದ ಮಳಿಗೆ ಸ್ಥಾಪನೆ ಮಾಡಲು ಉದ್ದೇಶಿಸಿದೆಯೇ?*

ಆ) *ಈ ಸಹಕಾರ ಸಂಘಕ್ಕೆ ನಿವೇಶನ ಮಂಜೂರಾಗಿದೆಯೇ? ಎಷ್ಟು ವರ್ಷವಾಯಿತು.*

ಇ) *ಸಹಕಾರ ಸಂಘದ ಮಳಿಗೆ ಪ್ರಾರಂಭಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ?*

ಶ್ರೀ ಸಿ. ಬೈರೇಗೌಡ (ತೋಟಗಾರಿಕೆ ರಾಜ್ಯ ಸಚಿವರ ಪರವಾಗಿ ಕೃಷಿ ಮಂತ್ರಿಗಳು) :

ಅ) ಹೌದು.

ಆ) ಈ ಸಹಕಾರ ಸಂಘಕ್ಕೆ ಮಾಲೂರು ಕೇಂದ್ರ ಸ್ಥಾನದಲ್ಲಿ ``95x241" (ನವಿಲುಕುಂಟೆ) ಜಾಗವನ್ನು ಮಾಲೂರು ಪುರಸಭೆಯ ವತಿಯಿಂದ ನೀಡಿರುತ್ತಾರೆ. ನಿವೇಶನವು ಬಿಡುಗಡೆಯಾಗಿ ಎರಡು ವರ್ಷಗಳಾದರು.

ಇ) ಸಂಘದ ಆಡಳಿತ ಮಂಡಳಿಯ ನಿರ್ಣಯದ ಪ್ರಕಾರ ಒಂದು ಹಣ್ಣು ತರಕಾರಿ

ಮಾರಾಟ ಮಳಿಗೆ, ಒಂದು ಗೊಬ್ಬರ, ಕ್ರಿಮಿನಾಶಕ ಮಾರಾಟ ಮಳಿಗೆ ಮತ್ತು ಹಣ್ಣು ತರಕಾರಿಗಳ ಸಂಗ್ರಹಣಾ ಕೇಂದ್ರವನ್ನು ಪ್ರಾರಂಭಿಸಲು ತೀರ್ಮಾನಿಸಲಾಗಿದ್ದು, ಏಪ್ರಿಲ್ 96ರ ಅಂತ್ಯದೊಳಗೆ ಪ್ರಾರಂಭ ಕಾರ್ಯಗಳನ್ನು ಕೈಗೊಳ್ಳಲಾಗುವುದು.

ಶ್ರೀ ಹೆಚ್.ಬಿ. ದೇವಿರಪ್ಪ : ಮಾನ್ಯ ಅಧ್ಯಕ್ಷರೆ, ಪ್ರಶ್ನೆ ಕೇಳಿದ ಉದ್ದೇಶವೇನೆಂದರೆ, ಮಾಲೂರು ತಾಲ್ಲೂಕಿನಲ್ಲಿ ಸಾಕಷ್ಟು ತರಕಾರಿಗಳನ್ನು ಬೆಳೆಯುತ್ತಿದ್ದು ತರಕಾರಿಗಳನ್ನು ತುಂಬಿದ ಹತ್ತಾರು ಲಾರಿಗಳನ್ನು ದಿನವಹಿ ಹೊರಗಡೆ ಕಳುಹಿಸಲಾಗುತ್ತಿದ್ದು ಈ ದಿಶೆಯಲ್ಲಿ ರೈತರಿಗೆ ಮಧ್ಯಸ್ಥಿಕೆಗಾರರ ಬಿಕ್ಕಟ್ಟನ್ನು ತಪ್ಪಿಸಬೇಕೆಂದು ಸಹಕಾರ ಸಂಘದ ಮೂಲಕ ತರಕಾರಿಗಳನ್ನು ಕೊಂಡು ಅವುಗಳನ್ನು ಹೊರ ರಾಜ್ಯಗಳಿಗೆ ಕಳುಹಿಸುವುದಕ್ಕೆ ಸಹಕಾರ ಸಂಘ ಸ್ಥಾಪಿಸುವ ವ್ಯವಸ್ಥೆ ಮಾಡುತ್ತೀರೆಂದು ನಂಬಿಕೊಂಡಿದ್ದೇನೆ. ಮಾಲೂರು ನಗರದಲ್ಲಿ ಒಂದು ಸಹಕಾರ ಸಂಘದ ಮಳಿಗೆಯನ್ನು ಸ್ಥಾಪಿಸಲಾಗುವುದೆಂದು ಹೇಳಿ ಈಗಾಗಲೇ ಎರಡು ವರ್ಷಗಳಾದವು. ಸಹಕಾರ ಸಂಘ ಸ್ಥಾಪಿಸಬೇಕಾದ ನಿವೇಶನವನ್ನು ತಮ್ಮ ಕೈಗೆ ಈಗಾಗಲೇ ಕೊಟ್ಟಿದ್ದು, ಅದನ್ನು ಇದುವರೆವಿಗೂ ಪರೀಶೀಲಿಸಿಲ್ಲ. ನಿವೇಶನದ ಜಾಗವನ್ನು ಈಗಲೋ, ಆಗಲೋ ಮುತ್ತಿಗೆ ಹಾಕಿ ಒತ್ತುವರಿಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ಹೇಳುತ್ತಾ, ಏಪ್ರಿಲ್ ತಿಂಗಳಿನಲ್ಲಿ ಸಹಕಾರ ಸಂಘದ ಸ್ಥಾಪನೆ ಪ್ರಾರಂಭಿಸಲಾಗುವುದೆಂದು ಹೇಳಿದ್ದೀರಿ. ಆದುದರಿಂದ ಸಾಧ್ಯವಾದಷ್ಟು ಬೇಗ ಅಲ್ಲಿ ಸಹಕಾರ ಸಂಘವನ್ನು ಪ್ರಾರಂಭಿಸಿ ರೈತರ ಹಿತದೃಷ್ಟಿಯಿಂದ ರೈತರು ಬೆಳೆದಂಥ ತರಕಾರಿಗಳನ್ನು ಕೊಂಡು ಅದನ್ನು ಹೊರ ರಾಜ್ಯಗಳಿಗೆ ಕಳುಹಿಸುವುದಕ್ಕೆ ಪ್ರಯತ್ನಿಸುತ್ತೀರಾ ಎಂದು ತಮ್ಮ ಮೂಲಕ ಕೃಷಿ ಮಂತ್ರಿಗಳನ್ನು ಕೇಳಬಯಸುತ್ತೇನೆ.

ಶ್ರೀ ಸಿ.ಬೈರೇಗೌಡ : ಏಪ್ರಿಲ್ ತಿಂಗಳಿನಲ್ಲಿ ಖಂಡಿತವಾಗಿಯೂ ಆ ಮಳಿಗೆಯನ್ನು ಪ್ರಾರಂಭ ಮಾಡಿಸುತ್ತೇನೆ.

ಅಧ್ಯಕ್ಷರು : ಮಾನ್ಯ ರಾಮಲಿಂಗಾರೆಡ್ಡಿಯವರೇ, ಮಾನ್ಯ ಕಾರ್ಮಿಕ ಮಂತ್ರಿಗಳು ಕಾರಣಾಂತರಗಳಿಂದ ಇವತ್ತು ಸದನಕ್ಕೆ ಗೈರು ಹಾಜರಾಗಿದ್ದಾರೆ. ಈ ಬಗ್ಗೆ ಅವರು ನನಗೆ ಪತ್ರ ಬರೆದು ತಿಳಿಸಿದ್ದಾರೆ. ಮಾನ್ಯ ಮಂತ್ರಿಗಳು ತಮ್ಮ ಪ್ರಶ್ನೆ ಸಂಖ್ಯೆ 114(1047) ಅವರ ಪರವಾಗಿ ಉತ್ತರಿಸಲು ಬೇರೆ ಯಾವ ಮಂತ್ರಿಗಳಿಗೂ ಅಥರೈಸ್ ಮಾಡಿಲ್ಲ. ಆದ್ದರಿಂದ ತಮ್ಮ ಪ್ರಶ್ನೆಯನ್ನು ಸಧ್ಯಕ್ಕೆ ತಡೆಹಿಡಿದಿದ್ದೇನೆ. ಅದನ್ನು ನಾಳೆಗೆ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು : ಮಾನ್ಯ ಚಂದ್ರಕಾಂತ್ ಬೆಲ್ಲದರವರೇ, ತಮ್ಮ ಪ್ರಶ್ನೆ ಸಂಖ್ಯೆ 115(1041) ಬಂತು. ಮಂತ್ರಿಗಳಿಗೆ ಏನೋ ಸ್ವಲ್ಪ ತೊಂದರೆಯಿಂದಾಗಿ ಸದನಕ್ಕೆ ಗೈರು ಹಾಜರಾಗಲು ನನ್ನ ಅನುಮತಿ ಪಡೆದಿದ್ದಾರೆ. ದಯವಿಟ್ಟು ಸ್ವಲ್ಪ ಸಹಕರಿಸಿ. ನೀವೂ ಕೂಡ ಒಂದಲ್ಲ ಒಂದು ಮಂತ್ರಿಗಳಾಗುವವರೇ ಅಲ್ಲವೇ? ತಾವು ನನ್ನ ಹಳೆಯ ಸ್ನೇಹಿತರಾದ್ದರಿಂದ ನೀವು ಮಂತ್ರಿಗಳಾಗಬೇಕೆಂಬುದು ನನ್ನ ಆಸೆಯಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ರೀತಿ ಪ್ರಶ್ನೆಗಳನ್ನು ಮುಂದೂಡುತ್ತಾ

ಹೋದರೆ ಹೇಗೆ? ಇದು ದಿನನಿತ್ಯ ಸರ್ವೇಸಾಮಾನ್ಯವಾದ ಸಂಗತಿಯಾಗಿದೆ.

ಅಧ್ಯಕ್ಷರು : ನಮ್ಮ ಅಧಿಕಾರಿಗಳು ಎಲ್ಲಾ ಪ್ರಶ್ನೆಗಳ ಮುಂದೆ 'ಟಿ' ಎಂದು ಬರೆದಿದ್ದಾರೆ. ನಾನು ಅದನ್ನು 'ಟ್ರಾನ್ಸಪೋರ್ಟ ಮಿನಿಸ್ಟರ'ಗೆ ಸಂಬಂಧಿಸಿದ ಪ್ರಶ್ನೆಗಳು ಎಂದು ಭಾವಿಸಿದ್ದೆ. ಆದರೆ, ಯಾವ ಪ್ರಶ್ನೆಗಳ ಎದುರು 'ಟಿ' ಎಂದು ಬರೆಯಲಾಗಿದೆಯೋ ಅಂತಹ ಪ್ರಶ್ನೆಗಳಿಗೆ ಉತ್ತರಿಸಲು ಸಮಯ ಕೇಳಿದ್ದಾರೆ ಎಂದು ಈಗ ಅರ್ಥವಾಯಿತು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆ ನಿನ್ನೆ ತಾನೇ ಇಲಾಖೆಗೆ ಬಂದಿದೆ. ಆದ್ದರಿಂದ ಪ್ರಶ್ನೆಗೆ ಉತ್ತರಗಳನ್ನು ಕಳುಹಿಸಲು ಸಾಧ್ಯವಾಗಿರುವುದಿಲ್ಲ. ಈಗ ನನ್ನ ಬಳಿ ಲಭ್ಯವಿರುವ ಮಾಹಿತಿ ಆಧರಿಸಿ ಆ ಬಗ್ಗೆ ವಿವರ ನೀಡಿ, ನಂತರ ಅವರಿಗೆ ಉತ್ತರಗಳನ್ನು ಕಳುಹಿಸಿಕೊಡಲೇ?

ಅಧ್ಯಕ್ಷರು : ಮಾನ್ಯ ಸಾರಿಗೆ ಮಂತ್ರಿಗಳೇ, ಆ ರೀತಿ ಮಾಡಲಾಗುವುದಿಲ್ಲ. ನನ್ನ ಅಂದಾಜು ಪ್ರಕಾರ ಬಹುಶಃ ಎರಡನೇ ಬಾರಿಗೆ ಮಾನ್ಯ ಸದಸ್ಯರ ಪ್ರಶ್ನೆ ಸದನದಲ್ಲಿ ಪ್ರಸ್ತಾಪ ಮಾಡಲು ಅವರಿಗೆ ಅವಕಾಶ ಸಿಕ್ಕಿದೆ. ಈ ರೀತಿ ಅವರ ಪ್ರಶ್ನೆಗಳಿಗೆ ಉತ್ತರ ಬರದಿದ್ದರೆ ಹೊಸ ಶಾಸಕರಾದ ಅವರು ಸದನದ ಕಾರ್ಯಕಲಾಪಗಳಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಮಾನ್ಯ ಚಂದ್ರಶೇಖರ್ ನಾಯಕರವರೇ, ಮಾನ್ಯ ಮಂತ್ರಿಗಳು ತಮ್ಮ ಪ್ರಶ್ನೆಗೆ ಉತ್ತರಿಸಲು ಸ್ವಲ್ಪ ಸಮಯ ಕೇಳಿದ್ದಾರೆ. ಮತ್ತೊಂದು ದಿವಸ ಅದನ್ನು ತೆಗೆದುಕೊಳ್ಳೋಣ. ದಯವಿಟ್ಟು ಸಹಕರಿಸಿ. ತಮಗೆ ಮಾಹಿತಿ ತರಿಸಿಕೊಡುತ್ತೇನೆ.

ಕಮಲಾಪುರ ಕ್ಷೇತ್ರದಲ್ಲಿ ನಕಲಿ ಬೀಜಗಳ ವಿತರಣೆ

118 - ಶ್ರೀ ರೇವನಾಯಕ್ ಬೆಳಮಗಿ (ಕಮಲಪುರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರುಗಳಿಗೆ ನಕಲಿ ಸೂರ್ಯಕಾಂತಿ ಬೀಜಗಳನ್ನು ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಆ) ಇಂತಹ ಬೀಜಗಳನ್ನು ಬಿತ್ತಿದ ರೈತರುಗಳು ತುಂಬಾ ನಷ್ಟವನ್ನು ಅನುಭವಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ರೈತರುಗಳಿಗೆ ಪರಿಹಾರ ಹಣವನ್ನೇನಾದರೂ ನೀಡಿದೆಯೇ; ನೀಡಿದ್ದಲ್ಲಿ ಎಷ್ಟೆಷ್ಟು ನೀಡಲಾಯಿತು ? ಇಲ್ಲದಿದ್ದಲ್ಲಿ ಯಾವಾಗ ಹಣವನ್ನು ನೀಡಲಾಗುವುದು ? ನೀಡಲಾದ ಪರಿಹಾರ ಮೊತ್ತವೆಷ್ಟು ?

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :

ಅ) ಕಮಲಾಪುರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರೈತರಿಗೆ ನಕಲಿ ಸೂರ್ಯಕಾಂತಿ ಬೀಜ ವಿತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಹಾಗೂ ರೈತರೂ ಸಹ ಇಂತಹ ದೂರುಗಳನ್ನು ಇಲಾಖೆಗೆ ಸಲ್ಲಿಸಿಲ್ಲ.